# ಬುದ್ಧ ದರ್ಶನ

ಸುಮಾರು ೮-೯ ವರ್ಷಗಳ ಹಿಂದೆ ಒಂದು ದಿನ ಶಿರಸಿಯ ಸೋಂದಾಸ್ವರ್ಣವಲ್ಲಿ ಮಠದಿಂದ ಒಂದು ಸಮಾಚಾರ ಬಂತು. ಶ್ರೀ ಶ್ರೀ ಗಳವರು ಸಮೀಪದ ತರಂಗಪತ್ರಿಕೆಯಲ್ಲಿ ಒಂದು ಲೇಖನ ಓದಿದರಂತೆ. ಅದರಲ್ಲಿ ಮಂಗಳೂರಿನ ಪಕ್ಕದಲ್ಲಿರುವ ಪುತ್ತೂರಿನ ಬೊಳ್ವಾರಿನಲ್ಲಿ ಶ್ರೀ ಕುದ್ದಣ್ಣಾಯರ ಮನೆಯಲ್ಲಿ ತಂಗಿದ್ದ ಒಬ್ಬ ಮಹಾತ್ಮರನ್ನು ಕುರಿತು ವಿಸ್ತಾರವಾಗಿ ಬರೆದಿತ್ತು. ಅದನ್ನು ಓದಿದ ತಕ್ಷಣವೇ ಶ್ರೀ ಶ್ರೀ ಗಳಿಗಳಿಗೆ ಅವರನ್ನು ಕಾಣಬೇಕೆಂದು ತ್ವರೆಯಾಯಿತು. ಮರುದಿನವೇ ದೈನಂದಿನ ಪೂಜಾದಿಗಳನ್ನು ಮುಗಿಸಿಕೊಂಡು ಪುತ್ತೂರಿಗೆ ಬಂದು ಅಜ್ಜನೆಂಬ ಆ ಮಹಾತ್ಮರನ್ನು ಕಂಡರು. ಮಾತನಾಡಿದರು.ಆದರೆ ಏನನ್ನು ನಿಶ್ಚೈಸಲು ಅವರಿಗೆ ಆಗಲಿಲ್ಲ. ಏಕೆಂದರೆ ಮಹಾತ್ಮರೆಂದರೆ ಏನಾದರೂ ಪವಾಡಗಳನ್ನು ತೋರಿಸಬೇಕು. ಕೊನೆಯಪಕ್ಷ ವಿಭೂತಿ ರುದ್ರಾಕ್ಷಾದಿಗಳಾದರೂ ಇರಬೇಕು. ನಮ್ಮಜ್ಜನಿಗಂತೂ ಏನೇನೂ ಇಲ್ಲ. ಸಾಮಾನ್ಯ ಒಬ್ಬ ಬಿಖಾರಿಯಂತಿದ್ದರೆ, ಅವರನ್ನು ಯಾರು ಮಹಾತ್ಮರೆನ್ನುವರು? ಇದು  ಯಾರ ತಪ್ಪೂ ಅಲ್ಲ.ಯಾರಿಗಾದರೂ ಕಷ್ಟವೆ.

ಆದರೆ ತರಂಗದಲ್ಲಿ ಏನೇನೋ ಬರೆದಿತ್ತಲ್ಲ, ಅದು ಹೇಗೆ? ಆದರಿಂದ ನಾನು ಆ ತರಂಗವನ್ನು ಓದಿ ಅವರನ್ನು ಕಂಡು ಶ್ರೀ ಶ್ರೀ ಗಳವರಿಗೆ ವರದಿಯನ್ನು ಕೊಡಬೇಕೆಂಬ ಸೂಚನೆ ಬಂತು.

ನಾನು ಆ ತರಂಗವನ್ನು ಪತ್ತೆ ಹಚ್ಚಿ, ಆ ಲೇಖನಗಳನ್ನು ಓದಿದೆ. ಇಂತಹ ವಿಷಯಗಳಲ್ಲಿ ನಾನೇ ಸ್ವತಃ ಅತ್ಯಂತ ಆಸಕ್ತನಾದ ಕಾರಣ ಆ ದಿನವೇ ಪುತ್ತೂರಿಗೆ ಪ್ರಯಾಣ ಮಾಡಿದೆ. ಪುತ್ತೂರನ್ನು ಹೋಗುವಾಗ ದಾರಿಯ ಮಧ್ಯದಲ್ಲಿ ನೋಡಿರುವೆನೇ ಹೊರತು , ಆ ಊರಿನ ಪರಿಚಯವೇ ಇರಲಿಲ್ಲ. ಇದರಿಂದ ಆ ಜಾಗವನ್ನು ಪತ್ತೆ ಹಚ್ಚುವುವುದು ಸ್ವಲ್ಪ ಕಷ್ಟವೇ ಆಯಿತು. ನಾನು ಮ್ಯೂಸ್ಸರಿನಿಂದ ಅಲ್ಲಿದೆ ತಲುಪಿದಾಗ ಬೆಳಗಿನ ಜಾವ. ಆ ತಿರುಗಾಟದಲ್ಲೇ ಬೆಳಗಾಯಿತು. ಊರು ಹೊಸತಾದ ಕಾರಣ ಸ್ನಾನಾದಿಗಳನ್ನು ಎಲ್ಲಿ ಮಾಡುವುದೆಂದೂ ಗೊತ್ತಾಗಲಿಲ್ಲ. ಅಲ್ಲೇ ಯಾರನ್ನಾದರೂ ಕೇಳಿ ಕೆರೆಯೋ ಕಲ್ಯಾಣಿಯೋ, ನಂತರ ನೋಡೋಣವೆಂದು ಯೋಚಿಸಿ ಖುದ್ದಾಗಿಯೇ ನಾನು ಅಜ್ಜನವರು ವಾಸವಾಗಿದ್ದ ಮನೆಯ ಮಹಡಿಯನ್ನು ಹತ್ತಿ ಒಳಗೆ ಹೋದೆ. ಆವಾಗ ಅಲ್ಲಿ ಶ್ರೀ ಅಜ್ಜನವರು ಮತ್ತು ಶ್ರೀ ಶಾಂತಾ ಅವರು ಇಬ್ಬರೇ ಇದ್ದರು. ಹೇಗೋ ಏನೋ ಎಂದು ಸಂಕೋಚದಿಂದ ಒಳಗೆ ಹೋದ ತತ್ ಕ್ಷಣವೇ ಅದ್ಭುತ ಆತ್ಮೀಯ ಸ್ವಾಗತ ನನಗೆ ದೊರೆಯಿತು. ಮನಸ್ಸಿನಲ್ಲಿದ್ದ ಸಂಕೋಚ, ಗೊಂದಲವು ಎಲ್ಲಾ ಮಾಯವಾಯಿತು. ನನ್ನ ಸ್ವಂತ ಜಾಗಕ್ಕೇ ನಾನು ಬಂದಂತೆ ಆಯಿತು. 'ನಾನು ಮಹಾ ಪುಣ್ಯವಂತ ಇಲ್ಲದಿದ್ದರೆ ಇಂತಹ ಸನ್ನಿವೇಶ ಕೂಡಿಬರಲು ಸಾಧ್ಯವೇಇಲ್ಲ' ಎಂಬುದು ಮನದಟ್ಟಾಯಿತು.

ಇದಕ್ಕೆ ತಕ್ಕಂತೆ , ಅವರೇ 'ಇಲ್ಲೇ ಸ್ನಾನ ಮುಂತಾದುವುಗಳಿಗೆ ಸೌಕರ್ಯವಿದೆ. ಸಂಕೋಚವಿಲ್ಲದೆ ನೀವು ಇಲ್ಲಿರಬಹುದು' ಎಂದು ಹೇಇದಾಗ, ನನ್ನ ಚಿಂತೆಯೆಲ್ಲವೂ ಮಾಯವಾಯಿತು.ಬಿಸಿನೀರಿನ ಸ್ನಾನವೇ ದೊರೆಯಿತು.ಎಲ್ಲವನ್ನೂ ಮುಗಿಸಿಕೊಂಡು ಅಜ್ಜನ ಹತ್ತಿರ ಬಂದೆ. ಪ್ರಸನ್ನ ಮುಖದಿಂದ ಅವರು ತೋರಿಸಿದ ಕುರ್ಚಿಯಲ್ಲಿ ಕುಳಿತುಕೊಂಡೆ. ನನ್ನ ವೈದಿಕ ವೇಷಾದಿಗಳನ್ನು ನೋಡಿಬಿಟ್ಟು 'ವೇದಾಧ್ಯಯನ ಮಾಡಿದ್ದೀರಾ? ಎಂದು ಅಜ್ಜನವರು ಕೇಳಿದರು. 'ಸ್ವಲ್ಪ ಮಾಡಿದ್ದೇನೆ ಎಂದೆ. 'ತೈತ್ತರೀಯ ಉಪನಿಷತ್ತು ಬರುತ್ತದೆಯೇ?' ಎಂದರು.'ಬರುತ್ತದೆ' ಎಂದೆ. 'ಸ್ವಲ್ಪ ಆನಂದವಲ್ಲಿಯನ್ನು ಹೇಳುತ್ತೀರಾ?' ಎಂದರು. ಕುಳಿತಿದ್ದ ಕುರ್ಚಿಯಲ್ಲೇ ಕಲನ್ನು ಮಡಿಸಿಕೊಂಡು ಚಕ್ಕಂಬಟ್ಟಲು ಹಾಕಿಕೊಂಡು ಕುಳಿತು ಪ್ರಾರಂಭಿಸಿದೆ. ಸಸ್ವರವಾಗಿ ಪೂರ್ಣವಾಗಿ ಹೇಳಿ ಮುಗಿಸಿದೆ. ಬಹಳ ಸಂತೋಷಪಟ್ಟುಕೊಂಡರು ಅಜ್ಜ. ನಂತರ ಬಂದಿರುವ ಕಾರಣವನ್ನು ಕೇಳಿದರು. ಯಥಾವತ್ತಾಗಿ ಎಲ್ಲವನ್ನೂ ಹೇಳಿದೆ. ಆದರೆ ಶ್ರೀಗಳವರ ಸಂಶಯದ ವಿಚಾರವನ್ನು ಹೇಳಲಿಲ್ಲ.ತರಂಗವನ್ನು ಓದಿದ ಮೇಲೆ ತಮ್ಮನ್ನು ನೋಡಬೇಕೆನಿಸಿತು ಎಂದೆ. ನಾನು ಬಂದ ಉದ್ದೇಶ ಅವರ ಜ್ಞಾನದ

ಗಾಂಭೀರ್ಯವನ್ನು ಸ್ವಲ್ಪ ಮಟ್ಟಿಗಾದರೂ ತಿಳಿಯಬೇಕೆಂಬುದೇ. ಇದಕ್ಕೆ ನಾನು ಮೊದಲೇ ಒಂದು ತೀರ್ಮಾನ ಮಾಡಿಕೊಂಡೇ ಬಂದಿದ್ದೆ.

ವೇದಾಂತ ಶಾಸ್ತ್ರದ ಕೊನೆಯ ಹಂತವೇ ಅಹಂ ಬ್ರಹ್ಮಾಸ್ಮಿ ಎಂಬ ಅನುಭವವೇ ಎಂದು ಹೇಳುವರು. ಆದರೆ ಇದರಲ್ಲಿ ಒಂದು ಸಮಸ್ಯೆ ಇದೆ."ಯತ್ರ।ತು।ಅಸ್ಯ।ಪರ್ವಮಾತ್ಮೈವಾಭೂತ್, ತತ್।ಕೇನ।ಕಂ।ಪಶ್ಯೇತ್, ಕೇನ।ಕಂ।ವಿಜಾನೀಯಾತ್"(ಬೃ.ಉ-೪-೫-೧೫)_ಎಂಬುದೇ ವೇದಾಂತದ ಅನುಭವದ ಕೊನೆಯೆಂದು ಹೇಳುತ್ತಾರೆ. ಜಗತ್ತೆಲ್ಲವೂ ಆತ್ಮನೇ ಆಗಿರುವುದರಿಂದ, ಆತ್ಮನನ್ನು ಮುಟ್ಟಿದ ಮೇಲೆ, ಅವನಿಗೆ ಬೇರೆಯಾಗಿ ಯಾವ ವಸ್ತುವೂ ಇಲ್ಲದ ಕಾರಣ ; ನೋಡುವವನು, ನೋದಲ್ಪಡುವುದು,ನೋಟ ಎಂಬ ಭೇದವೇ ತೊಲಗಿ ಹೋಗುವುದರಿಂದ , ಬೇರೆಯಾದ ಅನುಭವವೂ ಅಲ್ಲಿ ಇರಲು ಸಾಧ್ಯವೇ ಇಲ್ಲ. ಅನುಭವ ಎಲ್ಲದರಲ್ಲಿಯೂ ಈ ಮೂರು ಅಂಶ ಅನಿವಾರ್ಯ.ಇದನ್ನು 'ತ್ರಿಪುಟಿ' ಎನ್ನುತ್ತಾರೆ. ಇದರ ನಾಶವೇ ಜ್ಞಾನದ ಕೊನೆ ಎನ್ನುತ್ತಾರೆ. ಹಾಗಾದರೆ 'ಅಹಂ।ಬ್ರಹ್ಮ।ಅಸ್ಮಿ' (ನಾನು ಬ್ರಹ್ಮವಾಗಿ ಇದ್ದೇನೆ) ಎಂಬ ಉದ್ಗಾರ ಹೇಗೆ ಸಾಧ್ಯ? ಎಂಬ ಸಮಸ್ಯೆಯನ್ನು ಸಾಮಾನ್ಯ ಪಂಡಿತರು ಅರಿಯಲಾರರು. ಅದರಲ್ಲೂ 'ನಾನು' ಎಂದೂ 'ಅಸ್ಮಿ'ಎಂಬ ವರ್ತಮಾನಕಾಲದ ಉತ್ತಮಪುರುಷದ ಹೇಗೆ ಸಾಧ್ಯ?

ಟೆಕ್ನಿಕಲ್ ಆಗಿ ಇದುಸಾಧ್ಯವೇ ಇಲ್ಲ. ಕೇವಲ ಪುಸ್ತಕ ಪಂಡಿತರಿಂದ ಇದನ್ನು ತಿಳಿಯಲು ಸಾಧ್ಯವೇ ಇಲ್ಲ. ಈ ಸಂಶಯವನ್ನು ಅಜ್ಜನವರು ಪರಿಹರಿಸಿ ಬಿಟ್ಟರೆ , ಎಲ್ಲವೂ ಮುಗಿಯಿತು. ಇದರ ಮಹತ್ವವನ್ನು ಶಬ್ದದಿಂದ ಹೇಳಲು ಸಾಧ್ಯವೇ ಇಲ್ಲ. ಆದ್ದರಿಂದ ಈ ಸಂಶಯವನ್ನು ಧೈರ್ಯವಾಗಿ ನಾನು ಕೇಳೇಬಿಟ್ಟೆ.

ಅಜ್ಜನವರಿಗೆ ಇದು ನೀರು ಕುಡಿದಂತೆ ಎಂಬುದನ್ನು ಅಲ್ಪಜ್ಞನಾದ ನಾನು ಎಳ್ಳಷ್ಟೂ ನಿರೀಕ್ಷಿಸಲೇ ಇಲ್ಲ. 'ಇದೇನು ಮಹಾ' ಎಂಬ ರೀತಿಯಲ್ಲೇ ಅವರು ಉತ್ತರ ಕೊಡಲು ಶುರುಮಾಡಿಬಿಟ್ಟರು. 'ಏನು ನೀವು ಹೇಳುವುದು? ಬ್ರಹ್ಮವೆಂಬುದು ಕೊನೆಯಾಗಿರಲು ಹೇಗೆ ಸಾಧ್ಯ. ಎಲ್ಲಕ್ಕೂ ಕೊನೆ 'ಆತ್ಮ'ನಲ್ಲವೇ? ಬ್ರಹ್ಮವೆಂದರೆ ಪರಮಾತ್ಮನು-ಜಗತ್ಸ್ರಷ್ಟನು. ಜಗತ್ತಿಗೆ ಸೇರಿದವನು ಜೀವಾತ್ಮನು. ಇದರಲ್ಲಿ ಜೀವನೆಂಬ ಅಂಶವೂ, ಪರಮಾತ್ಮ ಎಂಬುದರಲ್ಲಿರುವ 'ಪರಮ' ಎಂಬ ಅಂಶವೂ ಹೋದರೆ, ಕೊನೆಯಲ್ಲಿ ಉಳಿಯುವವನು ಆತ್ಮನೇ ಅಲ್ಲವೆ! ಆದ್ದರಿಂದ 'ಅಹಂ ಬ್ರಹ್ಮಾಸ್ಮಿ'ಎಂಬುದೂ ಮಧ್ಯದಲ್ಲಿ ಬರುವ ಅನುಭವವೇ" ಎಂದು ಅನಾಯಾಸವಾಗಿ ಬಿಡಿಸಿ ಹೇಳಿಬಿಟ್ಟರು.ನನ್ನ ಸಕಲ ಸಂಶಯಗಳೂ ಧ್ವಂಸವಾದವು.ಹಾಗೆಂದರೆ ಏನು?

'ಬ್ರಹ್ಮ' ಎಂದರೆ ಏನು? ಎಂಬ ಪ್ರಶ್ನೆಗೆ ಉತ್ತರ 'ಜನ್ಮಾದ್ಯಸ ಯತಃ' ಎಂದು ಉತ್ತರವನ್ನು ಕೊಡ್ಲಾಗಿದೆ. ಭೃಗು ತಂದೆಯಾದ ವರುಣನನ್ನು ಕೇಳಿದರು'ಬ್ರಹ್ಮವೆಂದರೆ ಏನು?' ಎಂದು. ವರುಣನು ಹೇಳಿದನು'ಈ ಜಗತ್ತು ಎಲ್ಲಿಂದ ಹುಟ್ಟುವುದೋ, ಯಾವ ಆಧಾರದಲ್ಲಿ ಬೆಳೆಯುವುದೋ, ಕೊನೆಯಲ್ಲಿ ಎಲ್ಲಿ ಅದಗುವುದೋ, ಅದೇ ಬ್ರಹ್ಮ' ಎಂದು. ಭೃಗುವು ಇದನ್ನೇ ಆಧಾರವಾಗಿಟ್ಟುಕೊಂಡು ತೀವ್ರ ತಪಸ್ಸನ್ನು ಮಾಡಿ ಬ್ರಹ್ಮವನ್ನು ಅರಿತನು ಎಂದು ಕಥೆ ಹೇಳುತ್ತದೆ.ಆದರೆ ಇಂದಿಗೂ ಸಮಯೆಯೇ ಬ್ರಹ್ಮ ಯಾವುದೆಂದು. (ಸಮಸ್ಯೆಗೆ ಕೊನೆಗೆ ಅಯಮಾತ್ಮಾ ಬ್ರಹ್ಮ ಎಂದು ಹೇಳಿರುವುದೇ ಕಾರಣ.)

ಜಗತ್ತಿಗೆ ಕಾರಣವಾದ ವಸ್ತುಗಳನ್ನು ಹೇಳುವ ವಾಕ್ಯಗಳಲ್ಲಿ 'ಬ್ರಹ್ಮವಾ ಇದಮಗ್ರ ಆಸೀತ್' ಬ್ರಹ್ಮವೇ ಜಗತ್ತಿಗೆ ಮೂಲಕಾರಣ ಎಂದಿರುವಂತೆಯೇ'ಸದೇವ ಸೌಮ್ಯೇದಮಗ್ರ ಆಸೀತ್'(ಸತ್ತೇ ಜಗತ್ತಿಗೆ ಮೂಲಕಾರಣ) 'ಅಸದೇವದಮಗ್ರ ಆಸೀತ್'(ಅಸತ್ತೇ ಜಗತ್ತಿಗೆ ಮೂಲ ಕಾರಣ)'ಆತ್ಮಾವಾಇದಮಗ್ರ ಆಸೀತ್'(ಆತ್ಮನೇ ಜಗತ್ತಿಗೆ ಮೂಲ ಕಾರಣ) ಎಂದು ನಾಲ್ಕು ವಿಧ ಪದಗಳು ಕಂಡುಬರುತ್ತದೆ. ಜಗತ್ತಿಗೆ ಕಾರಣವಾದ ವಸ್ತುಗಳನ್ನು 'ಬ್ರಹ್ಮ' 'ಸತ್' 'ಅಸತ್' 'ಆತ್ಮಾ' ಎಂದು ನಾಲ್ಕು ಪದಗಳಿಂದ ಹೇಳಲಾಗಿದೆ. ಇವುಗಳಲ್ಲಿ 'ಬ್ರಹ್ಮ'ಪದವೇ ಕೊನೆ. ಅದರ ಹಿಂದೆ 'ಸತ್'ಪದವು, ಅದರ ಹಿಂದೆ 'ಅಸತ್'ಪದವು, ಅದರ ಹಿಂದೆ 'ಆತ್ಮ'ಪದವೂ ಇರುವುದರಿಂದ , ಹಿಂದಕ್ಕೆ ಹೋದಾಗ ಆತ್ಮಪದವೇ ಉಳಿಯುತ್ತದೆ. ವ್ಯವಹಾರ ಪ್ರಾರಂಭವಾಗುವುದು 'ಬ್ರಹ್ಮ' ಪದದಿಂದ. ಆದರೂ ತತ್ವದ ದೃಷ್ಟಿಯಿಂದ 'ಆತ್ಮ'ಪದವೇ ಎಲ್ಲಕ್ಕೂ

ಮೂಲವಾಗಿರುವುದರಿಂದ 'ಅಹಂ ಬ್ರಹ್ಮಾಸ್ಮಿ' ಎಂಬ ಅನುಭವ ಕೊನೆಯಲ್ಲವೆಂಬುದು ಪೂಜ್ಯ ಅಜ್ಜನ ನಿಲುವಾಗಿದೆ.

ಆದರೆ ,ಆತ್ಮಾ ಎಂಬ ಸ್ಥಿತಿಯಲ್ಲಿ ಯಾವ ಅನುಭವವೂ ಇರುವುದಿಲ್ಲ.'ಯತ್ರತ್ವಸ್ಯ ಸರ್ವಮಾತ್ಮೈವಾಭೂತ್, ತತ್ ಕೇನಕಂಪಶ್ಯೇತ್' ಎಂದಿದೆಯಲ್ಲಾ ಎಂದು ಒಬ್ಬರು ಕೇಳಿದರು. ಇದಕ್ಕೆ 'ಹಾಗಲ್ಲ 'ಜೀವಾತ್ಮಾ' ಎಂಬುದರಲ್ಲಿ 'ಜೀವ' ಮತ್ತು 'ಆತ್ಮ' ಎಂದು ಎರಡಂಶ ಇದೆಯಲ್ಲವೇ. ಇದರಲ್ಲಿ ಜೀವನ ಆಟ ಅಲ್ಲಿಗೆ ಮುಗಿಯುತ್ತದೆ.ಆತ್ಮನ ವ್ಯವಹಾರ ಪ್ರಾರಂಭವಾಗುತ್ತದೆ ಎಂಬುದೇ ಅದರ ಅರ್ಥ" ಎಂಬುದೇ ಅಜ್ಜನ ಉತ್ತರ. ಅಂದರೆ ಜೀವ ಎಂಬ ತತ್ವ ಮಾಯೆಯಿಂದ ಕೂಡಿದ ತತ್ವವಾದರೆ , ಅದರ ಮುಂದೆ ಇರುವ ತತ್ವವೇ ಆತ್ಮ ತತ್ವವಾಗುತ್ತದೆ. ಇದೇ ಎಲ್ಲಕ್ಕೂ ಆಧಾರ.'ಪಾದೋಸ್ಯ ವಿಶ್ವಾಭೂಕ್ತಾನಿ ತ್ರಿಪಾದಸ್ಯಾಮಾತ್ರ್ಯಂದಿನಿ(ಭೌತಿಕ ಜಗತ್ತೆಲ್ಲವೂ ೧/೪ ಭಾಗವಾದರೆ ಇದರ ಮುಂದಿನ ೩/೪ ಭಾಗವು ದಿವ್ಯ ಮತ್ತು ಅಮೃತ ರೂಪ) ಎಂಬ ಪುರುಷಸೂಕ್ತದ ವಚನ ಗಮನಾರ್ಹ. ಅಧ್ಯಾತ್ಮಕ್ಕೆ ಆತ್ಮನೇ ಮೂಲ, ಬ್ರಹ್ಮ ಮಧ್ಯ, ಈ ವಿಶ್ವವೆಲ್ಲವೂ ಅದೆ–ಇಷ್ಟೇ ಸಾರ.ಆದ್ದರಿಂದಲೇ 'ಆತ್ಮಾವಾ ಅರೆ ಶ್ರೋತ್ರವ್ಯಃ, ಮಂತವ್ಯಃ, ನಿದಿದ್ಯಾಸಿತವ್ಯಃ, ಆತ್ಮನಿಖಿಲ್ವರೇ ದೃಷ್ಟೇ ಶೃತೇ ಮತೇಸರ್ವಂ ವಿದಿತಂ' ಎಂದೇ ಕೊನೆಯ ನಿರ್ಣಯ. ಇದರ ಮೇಲೂ ತುಂಬಾ ವಿವರಣೆ ಬೇಕಾಗಬಹುದು. ಪ್ರಕೃತ, ನನಗೆ ಪೂಜ್ಯ ಅಜ್ಜನವರ ಮಾರ್ಗದರ್ಶನದಿಂದ ಸಕಲ ಸಮಸ್ಯೆಯೂ ಪರಿಹೃತವಾಯಿತು.

ಇದರಂತೆಯೇ ಮತ್ತೊಂದು ಸಂದರ್ಭವು ಒದಗಿತ್ತು. ಅಜ್ಜನವರು ಪೂರ್ಣ ಸಮಾಧಿ ಸ್ಥಿತಿಯಲ್ಲೂ ಮಾತನಾಡುತ್ತಿದ್ದರೆಂಬುದನ್ನು ಒಂದು ಕಡೆಯಲ್ಲಿ ಹಿಂದೆ ಓದಿದ್ದೆ. ಇದು ಹೇಗೆ ಸಾಧ್ಯ? ಏಕೆಂದರೆ ಸಮಾಧಿಸ್ಥಿತಿ ಎಂದರೆ ಬುದ್ಧಿಯ ಕ್ರಿಯೆ ಪರಿಪೂರ್ಣವಾಗಿ ನಿಂತುಬಿಟ್ಟಿರುತ್ತದೆ. ಮಾತು ಎಂದರೆ ಬುದ್ಧಿಯ ಕ್ರಿಯೆಯೇ ಅಲ್ಲವೇ! ಆದ್ದರಿಂದ ಸಮಾಧಿ ಸ್ಥಿತಿಯಲ್ಲಿ ಮಾತನ್ನಾಡಲು ಹೆಗೆ ಸಾಧ್ಯ? ಎಂಬ ಪ್ರಶ್ನೆ ನನಗೆ ಇತ್ತು. ಇದನ್ನು ಒಂದು ಸಮಯದಲ್ಲಿ ನಾವಿಬ್ಬರೂ ಮಾತ್ರ ಇರುವಾಗ ಕೇಳಿದೆ. ತಕ್ಷಣವೇ ಅಜ್ಜನ ಮುಖ ಪರಿವರ್ತನೆಯಾಯಿತು, ತೇಜೋಮಯವಾಯಿತು. 'ಆಚಾರ್ಯರೆ, ನಿಮಗೆ ನಮ್ಮಲ್ಲಿ ನಂಬಿಕೆಯಿದೆಯೇ? ' ಎಂದು ಪರಮ ಪ್ರೀತಿಯಿಂದ ಕೇಳಿದರು. 'ಏನಜ್ಜ! ಇಲ್ಲದೇ ಇದ್ದರೆ ,ನಾನು ಇಲ್ಲಿಗೆ ಬರುತ್ತಿದ್ದೆನೆ?' ಎಂದೆ ನಾನು. ಅವರು 'ಆತ್ಮನಿಗೆ ಮೆದುಳುಂಟೇ?' ಎಂದು ಪ್ರಶ್ನೆ ಮಾಡಿದರು. ನಾನು ದಿಗ್ಭ್ರಾಂತನಾದೆ. ಅವರೇ ಮುಂದುವರೆಸಿದರು. 'ಈ ಶರೀರಕ್ಕೆ , ಅಥವಾ ಜೀವಕ್ಕಲ್ಲವೇ ಮೆದುಳು ಬೇಕಗಿರುವುದು. ಆತ್ಮನೇ ಎಲ್ಲಕ್ಕೂ ಮೂಲಾಧಾರ. ಮೆದುಳನ್ನು ನಡೆಸುವವನೂ ಅವನೇಯಲ್ಲವೆ? ಅಂತವನು ಶರೀರದಲ್ಲಿರುವ ವಾಗಿಂದ್ರಿಯವನ್ನು ನಡೆಸಲಾರನೇ? ಮಸ್ತಿಷ್ಕ ನಿಷ್ಕ್ರಿಯವಾದರೂ ನಿಮಗೋಸ್ಕರ ಮಾತಿನ ಮೂಲಕ ವಿಷಯವನ್ನು ಅವನು ತಿಳಿಸಬಹುದಲ್ಲವೇ! ನಾನು, ನೀನು, (ಪಾದದಲ್ಲಿ ಮಲಗಿದ್ದ ನಾಯನ್ನು ತೋರಿಸಿ) ಈ ನಾಯಿಯು –ಈ ಮೂರೂ ಒಂದೇ ಎಂಬುದನ್ನೂ ನೋಡುತ್ತಿದ್ದೇನ್ವೆ ಮತ್ತು ಈ ಮೂರೂ ಹೇಗೆ ಬೇರೆಯಾಗಿದೆ ಎಂಬುದನ್ನೂ ನಾವು ನೋಡುತ್ತಿದ್ದೇವೆ' ಈ ಮಾತನ್ನು ನಂಬುತ್ತೀರಾ? ಎಂದು ಮುಗಿಸಿದರು. ಕೆಲವು ನಿಮಿಷ ನನಗೆ ಮಾತೇ ಹೊರಡಲಿಲ್ಲ. ಎಂತಹ ಸತ್ಯ.. ಎಂತಹ ಅದ್ಭುತ... ಎಂತಹ ಭಾಗ್ಯಶಾಲಿ ನಾನು.. ನಾನೇ ಧನ್ಯ.. ಇತ್ಯಾದಿ..ಇತ್ಯಾದಿ ಮುಂದೆ ಗೀತೆಯ'ಅವಿಭಕ್ತಂ ಚ ಭೂತೇಷುವಿಭಕ್ತಮಿವಚಸ್ಥಿತಂ " ಇತ್ಯಾದಿ ವಚನಗಳು ಮನದಲ್ಲಿ ಓಡಾಡಿದವು.

ಅಬ್ಬ! ಅಜ್ಜನು ಎಂತಹ ಮಹಾಶಕ್ತಿ! ಆತ್ಮ ತತ್ವವೇ ನನ್ನ ಎಡುರಲ್ಲಿ ಕುಳಿತಿದೆ.ಮೊದಲೇ ಸ್ವಲ್ಪ ಮಟ್ಟಿಗೆ ಶ್ರೀ ಶ್ರೀರಂಗರ ಕೃಪೆಯಿಂದ ನಾನರಿತದ್ದರಿಂದ ,ಈವಾಗ ಈ ಮಹಾತ್ಮರಿಂದ ನನ್ನ ಕಣ್ಣು ಪೂರ್ಣವಾಗಿ ತೆರೆದಂತಾಯಿತು. ಒಟ್ಟಿನಲ್ಲಿ , ನಮ್ಮದೇಶಕ್ಕೆ ೦ಳ್ಳೆಯ ಭವಿಷ್ಯವಿದೆ ಸಂಶಯವಿಲ್ಲ. ಇಂತಹ ದಿವ್ಯಶಕ್ತಿಗಳು ಈ ಭೂಮಿಯಲ್ಲಿ ಇಳಿಯಬೇಕಾದರೆ , ಈ ಭಾರತ ಎಂತಹ ಪುಣ್ಯಭೂಮಿ, ಜ್ಞಾನಭೂಮಿ, ತಪೋಭೂಮಿ, ಯೋಗಭೂಮಿ.... ಇನ್ನೇನು ಬೇಕಾದರೂ ಆಗಬಹುದಲ್ಲವೇ!

ಜಯತು ಭಾರತಂ!

ವಿದ್ವಾನ್ ಕೆ.ಎಸ್.ವರದಾಚಾರ್ಯ